KAS Mains Qualifying Kannada Question Paper 03-05-2025

**SUBJECT CODE : 642**

**2025**

# ಕನ್ನಡ (ಅರ್ಹತಾ ಪತ್ರಿಕೆ)

| ಸಮಯ : 2 ಗಂಟೆಗಳು | ಗರಿಷ್ಠ ಅಂಕಗಳು : 150 |
|---|---|

# Kannada (Qualifying Paper)

| Time : 2 Hours | Maximum Marks : 150 |
|---|---|

## SPECIFIC INSTRUCTIONS
## ನಿರ್ದಿಷ್ಟ ಸೂಚನೆಗಳು

(i) *Candidates have to attempt **all** questions.*
*ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕು.*

(ii) *Marks carried by each question are indicated at its end.*
*ಪ್ರತಿ ಪ್ರಶ್ನೆಯ ಕೊನೆಯಲ್ಲಿ ಅದಕ್ಕೆ ನೀಡಲಾಗುವ ಅಂಕಗಳನ್ನು ನಮೂದಿಸಲಾಗಿದೆ.*

WWW.SHIKARAT.COM

## SECTION–A / ವಿಭಾಗ–A

1. ಈ ಕೆಳಗಿನ ವಿಷಯವನ್ನು ಕುರಿತು 300 ಪದಗಳಿಗೆ ಮೀರದಂತೆ ಪ್ರಬಂಧ ರಚಿಸಿ. **25**

ಸೈಬರ್ ಅಪರಾಧಗಳು

2. ಈ ಕೆಳಗಿನ ಗದ್ಯಭಾಗವನ್ನು ಗಮನವಿಟ್ಟು ಓದಿಕೊಂಡು ಕೊನೆಯಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಲಂಡನ್ ಪಟ್ಟಣವೆಂದರೆ ಒಂದು ಸ್ವತಂತ್ರ ಜಗತ್ತು. ಇಲ್ಲಿಯ ರಸ್ತೆಗಳಲ್ಲಿ ವ್ಯಾಪಾರವು ತುಂಬಿ ಟ್ರಾಮ್ ಬಸ್ಸುಗಳಿಗೆ ಸಕಾಲಕ್ಕೆ ಹೋಗುವುದಾಗುವುದಿಲ್ಲ. ಬಹಳ ಹೊತ್ತು ನಡು ನಡುವೆ ನಿಲ್ಲಬೇಕಾಗುತ್ತದೆ. ಇದನ್ನು ತಪ್ಪಿಸುವುದಕ್ಕಾಗಿ ಭೂಗರ್ಭದಲ್ಲಿ ಗಾಡಿಯನ್ನು ಒಯ್ದಿದ್ದಾರೆ! ಹಳಿ, ಇಲೆಕ್ಟ್ರಿಕ್ ಗಾಡಿ, ನಿಲ್ಮನೆ ಎಲ್ಲ ಒಳಗೆ! ಒಮ್ಮೊಮ್ಮೆ ನೆಲದ ಕೆಳಗೆ ಐವತ್ತು ಫೂಟು ಹೋಗಿರುತ್ತೇವೆ! ಜೋರಾಗಿ ಗಾಳಿ ಬೀಸುವಷ್ಟು ಹವೆಯಾಡುವಂತೆ ಇಲ್ಲಿ ವ್ಯವಸ್ಥೆಯನ್ನು ಮಾಡಿದ್ದಾರೆ. ನಿಮಿಷಕ್ಕೊಂದರಂತೆ ಕತ್ತಲು ಗವಿಗಳೊಳಗಿಂದ ಹಾಯ್ದು ಗಾಡಿಗಳು ಧಡಧಡ ಹೋಗುತ್ತಿರುತ್ತವೆ!

P.T.O.



WWW.SHIKARAT.COM
www.shikarat.com
Scanned with OKEN Scanner

ವಿಚಿತ್ರ ಸೃಷ್ಟಿ ! ಇಷ್ಟು ಕೆಳಗೆ ಹಗಲೆಲ್ಲ ಹತ್ತಿ ಇಳಿಯುವುದು ಹೇಗೆ? ಅದಕ್ಕಾಗಿ 'Escalators' (ಎಸ್ಕೆಲೇಟರ್ಸ್) ಎಂಬ ಮೆಟ್ಟಿಲುಗಳನ್ನು ಮಾಡಿದ್ದಾರೆ. ಇವು ಒಂದೇ ಸಮನೆ ತಿರುಗುತ್ತಿರುತ್ತವೆ. ಒಂದು ಮೆಟ್ಟಿಲಿನ ಮೇಲೆ ಹೋಗಿ ನಿಂತರೆ ತೀರಿತು. ಅನಾಯಾಸವಾಗಿ ಮೇಲೆ ಇಲ್ಲವೆ ಕೆಳಗೊಯ್ದುಬಿಡುತ್ತವೆ.

ಪೇಟೆಯಲ್ಲಿ ತಿರುಗಾಡಿದೆ. 'ವೂಲ್ ವರ್ಥ್' ಎಂಬ 'ಸ್ಟೇಷನರಿ' ಅಂಗಡಿಯು ನೋಡುವ ಹಾಗಿದೆ. ಎಲ್ಲ ತರದ ಸಾಮಾನುಗಳನ್ನು ಇಲ್ಲಿ ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಮಾರುತ್ತಾರೆ. ಈ ಅಂಗಡಿಯ ವಿಧವಿಧದ ವಿಭಾಗಗಳನ್ನು ನಿರ್ಮಿಸಿದ ಬುದ್ಧಿಯ ಚಮತ್ಕಾರವು ನೋಡತಕ್ಕಂತಹುದು. ಪ್ರಾಚೀನ ಮಹಾಕಾವ್ಯದಂತೆ ಇದೊಂದು ಮಹಾಕೋಶವಾಗಿದೆ. ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡುಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು. ಯುದ್ಧ ಸಾಮಗ್ರಿ ಎಲ್ಲವೂ ಇಲ್ಲಿ ದೊರೆಯುತ್ತವೆ.

ಸ್ಟ್ರಾಂಡ್ ದಲ್ಲಿಯ ಸ್ಯಾವ್ಯ್ಯಾಯ್ ಸಿಂಪಿಗಳು ಇಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದಾರೆ. ಇಲ್ಲಿಯ ಒಂದು ಸಾದಾ ಸೂಟು ಹೊಲಿಯಬೇಕಾದರೂ ಸುಮಾರು ನೂರು ರೂಪಾಯಿ ಬೇಕು! ಆದರೆ "Fifty Shilling Tailors (ಐವತ್ತು ಶಿಲಿಂಗಿನ ಸಿಂಪಿಗಳು)" ಎಂಬ ಒಂದು ಸಂಸ್ಥೆಯ ಶಾಖೆಗಳು ಎಲ್ಲ ಕಡೆಗೆ ಇವೆ !

ಇಲ್ಲಿ ಗಂಡಿಗಿಂತ ಹೆಣ್ಣು ಹೆಚ್ಚಿದ್ದ ಹಾಗೆ ಕಾಣುತ್ತದೆ. ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಉಪಹಾರ ಗೃಹಗಳಲ್ಲಿ ಮಾಣಿಗಳಿಲ್ಲ, ಬೆಂಗಳೂರಿನ ಮಾತಿನಲ್ಲಿ ಹೇಳುವುದಾದರೆ 'ಅಮ್ಮಣ್ಣಿ' ಗಳಿರುತ್ತಾರೆ. ಯಾವುದಾದರೊಂದು ದೊಡ್ಡ ಅಂಗಡಿಗೆ ಹೋದರೆ ಅಲ್ಲಿಯ ಟೈಪಿಸ್ಟ್ ಕಾರಕೂನ, ಒಬ್ಬಳು ಹೆಣ್ಣುಮಗಳು, ಸಿನಿಮಾ ಗೃಹದಲ್ಲಿ ನಿಮ್ಮ ಜಾಗವನ್ನು ಹುಡುಕಿಕೊಡುವವರು ಹೆಣ್ಣು! ನಮ್ಮ ಕಾಲೇಜಿನಲ್ಲಿ ಸಹ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರನ್ನು ಇಟ್ಟಿದ್ದಾರೆ. ಹೆಣ್ಣು ಮಕ್ಕಳನ್ನು ಅತ್ಯಾದರದಿಂದ ನಡೆಸಿಕೊಳ್ಳುವ ಸಂಸ್ಕೃತಿಯ ಶಿಖರವನ್ನು ಇಂಗ್ಲೆಂಡಿನಲ್ಲಿಯೇ ಕಾಣಬೇಕೆಂದು ಆಂಗ್ಲರ ಮತ. ಇದೀಗ ಹೆಣ್ಣನ್ನು ಸತ್ಕರಿಸುವ ರೀತಿಯಿದು.

ಇಲ್ಲಿಯ ಇಂಡಿಯಾ ಆಫೀಸು ನೋಡುವ ಹಾಗಿದ. ವಾಚನಾಲಯದಲ್ಲಿ ಅನೇಕ ಮಹತ್ವದ ಪ್ರಸ್ತಕಗಳಿವೆ. ಕರ್ನಾಟಕದ ವಿಷಯವಾಗಿ ಎಷ್ಟೋ ಹೊಸ ಮಾತುಗಳು ಇಲ್ಲಿ ಗೊತ್ತಾಗಬಹುದೆಂದು ಕಾಣುತ್ತದೆ. ಇಲ್ಲಿಯ ವಸ್ತು ಸಂಗ್ರಹಾಲಯದಲ್ಲಿ ಹಿಂದೂಸ್ಥಾನದ ಲಲಿತ ಕಲೆಯ ಹಾಗೂ ಇನ್ನುಳಿದ ಮಾರ್ಗಗಳ ಮಾದರಿಗಳು ನೋಡಲು ದೊರೆಯುತ್ತವೆ. ಎಲ್ಲಾ ಮುಖ್ಯವಾದ ಇಂಗ್ಲೀಷ್ ವರ್ತಮಾನ ಪತ್ರಿಕೆಗಳು ಬರುತ್ತವೆ (ಹಿಂದೂಸ್ಥಾನದಲ್ಲಿ ಪ್ರಕಟವಾಗುವಂಥವು). ಈ ಕಚೇರಿಯಿದ್ದ 'ಚೇರಿಂಗ್ ಕ್ರಾಸ್' ಎಂಬ ಓಣಿಯಲ್ಲಿ ಆಂಗ್ಲರ ಸಾಮ್ರಾಜ್ಯ ವೈಭವವು ಕಂಡುಬರುವುದು! ಇಂಡಿಯಾ ಆಫೀಸಿನ ಹತ್ತಿರ ಆಫ್ರಿಕನ್ ಕಚೇರಿ, ಇನ್ನೊಂದು ವಸಾಹಾತಿನ ಕಚೇರಿ, ನೂರೆಂಟು ಬ್ಯಾಂಕ್ ಗಳು, ದೊಡ್ಡ ಕಂಪನಿಗಳ ಕಚೇರಿಗಳು, ಎಲ್ಲವೂ ದಂಗುಬಡಿಸುವಂತೆ ನೆರೆದಿವೆ ! ಒಂದೊಂದು ದೇಶದ ಮೇಲಿನ ಪ್ರಭುತ್ವ ಇಲ್ಲಿಯ ಒಂದೊಂದು ಕಚೇರಿಯಿಂದ ನಡೆಯುತ್ತದೆ. ಈ ದೊಡ್ಡ ಬೀದಿಯು ಸಾಮ್ರಾಜ್ಯದ ಬೀದಿ.



www.shikarat.com
Scanned with OKEN Scanner

ನಗರದ ಪ್ರತಿಯೊಂದು ಕೂಟಕ್ಕೆ ಒಂದು ಹೆಸರೇನಾದರೂ ಇದ್ದೇ ಇರುತ್ತದೆ. 'Trafalgar Square' (ಟ್ರಫಾಲ್ಗರ್ ಸ್ಕ್ವೇರ್) ಎಂಬಲ್ಲಿ ನೆಲ್ಸನ್ನನ ಮೂರ್ತಿಯಿದೆ. ಈ ಶಿಲಾಮೂರ್ತಿಯ ಕೆಳಬದಿಗೆ ಅವನ ಜೀವನದಲ್ಲಿಯ ಮಹತ್ತ್ವದ ಸನ್ನಿವೇಶಗಳನ್ನು ಕಲ್ಲಿನಲ್ಲಿ ಅರಳಿಸಿದ್ದಾರೆ. ಇಲ್ಲಿಂದ ತುಸುದೂರಕ್ಕೆ ವೆಲ್ಲಿಂಗ್ಟನ್ನನ ಶಿಲಾಪ್ರತಿಮೆ. ಬೀದಿಬೀದಿಗಳ ಮೂಲೆ ಮೂಲೆಗೆ ಇತಿಹಾಸ ಪ್ರಸಿದ್ಧ ಪುರುಷರು, ತಮ್ಮ ದೇಶಕ್ಕಾಗಿ ಜೀವನವನ್ನು ಲೆಕ್ಕಿಸದೆ ದುಡಿದವರು ನಿಂತು ಕೈಯೆತ್ತಿ "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ" ಎಂದು ಹೇಳುತ್ತಿರುವಂತೆ ತೋರುತ್ತದೆ. ಹೆಜ್ಜೆ ಹೆಜ್ಜೆಗೆ ಇತಿಹಾಸದ ಅಡಿಗಲ್ಲುಗಳು ದೊರೆಯುತ್ತವೆ.

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** **5×5=25**

(a) ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು ?

(b) ಲಂಡನ್ ಪಟ್ಟಣವು ಆಧುನಿಕತೆಗೆ ಹೇಗೆ ತೆರೆದುಕೊಂಡಿದೆ ? ವಿವರಿಸಿ.

(c) ಲಂಡನ್ನಿನಲ್ಲಿರುವ ಇಂಡಿಯಾ ಆಫೀಸಿನ ಸ್ಥಿತಿಗತಿ ಹೇಗಿದೆ ತಿಳಿಸಿ.

(d) ಇಂಗ್ಲೆಂಡಿನಲ್ಲಿ ಹೆಣ್ಣನ್ನು ಸತ್ಕರಿಸುವ ರೀತಿ ಎಂತಹದ್ದು ವಿವರಿಸಿ.

(e) 'ಟ್ರಫಾಲ್ಗರ್ ಸ್ಕ್ವೇರ್'ನ ವಿಶೇಷತೆಯನ್ನು ತಿಳಿಸಿ.

**3. ಸಂಕ್ಷಿಪ್ತ ಲೇಖನ / (Precis Writing) :** **25**

**ಸುಮಾರು 100 ಶಬ್ದಗಳಿಗೆ ಮೀರದಂತೆ ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಬರೆಯಿರಿ ಹಾಗೂ ಸೂಕ್ತ ಶೀರ್ಷಿಕೆ ನೀಡಿ.**

ಒಂದೂರಿನಲ್ಲಿ ಒಬ್ಬ ರೈತ ಇದ್ದ ಅವನಿಗೆ ಐದು ಜನ ಗಂಡುಮಕ್ಕಳು, ಒಬ್ಬಳೇ ಹೆಣ್ಣುಮಗಳು. ಐದು ಜನ ಗಂಡುಮಕ್ಕಳಲ್ಲಿ ಕೊನೆಯವನು ಕುಂಟ. ಅವನನ್ನು ಕಂಡರೆ ಮನೆಯಲ್ಲಿ ತಾಯಿ ತಂದೆ ಅಣ್ಣಂದಿರು ಯಾರಿಗೂ ಆಗುತ್ತಿರಲಿಲ್ಲ. ತಂಗಿಗೆ ಮಾತ್ರ ಕುಂಟಣ್ಣನ ಮೇಲೆ ಬಹಳ ಪ್ರೀತಿ. ಅವನೂ ತಂಗಿಯನ್ನು ಪ್ರೀತಿಸುತ್ತಿದ್ದ.

ಕೆಲವು ದಿನಗಳ ಮೇಲೆ ತಂದೆ ತೀರಿಕೊಂಡನು. ತಾಯಿಯೇ ಸಂಸಾರದ ಹೊಣೆಯನ್ನು ಹೊತ್ತಳು. ಜಮೀನು ತೊರೆಯಿಂದಾಚೆ ಇದ್ದಿತು. ಆರು ಕಟ್ಟಿಕೊಂಡು ಐದು ಜನರೂ ಹೋದರು. ತಾಯಿ ಅವರಿಗೆಲ್ಲ ಊಟವನ್ನು ಹೊರಿಸಿ ಮಗಳನ್ನು ಕಳುಹಿಸಿದಳು. ನಾಲ್ಕು ಜನಕ್ಕೆ ಒಳ್ಳೆಯ ಮುದ್ದೆ-ಸಾರನ್ನೂ, ಕುಂಟನಿಗೆ ಮಾತ್ರ ಮುಗ್ಗಲು ಹುರಳಿ, ಹಳಸಲು ಮುದ್ದೆಯನ್ನು ಕೊಟ್ಟು ಕಳುಹಿಸಿದಳು. ಊಟ ಹೊತ್ತುಕೊಂಡು ಆ ಹುಡುಗಿ ತೊರೆಯ ಹತ್ತಿರ ಬಂದಳು. ಅಲ್ಲಿ ಒಬ್ಬ ರಾಕ್ಷಸನಿದ್ದ. ಅವನು ಬಂದು ಹುಡುಗಿಯನ್ನು ಅಡ್ಡಗಟ್ಟಿದ. ಹುಡುಗಿ ಹೆದರಿ ಚಿಟ್ಟನೆ ಚೀರಿಕೊಂಡಲುಬಿಟ್ಟನು. "ನೀನು ತಂದಿರುವ ಮುದ್ದೆಯೆನ್ನೆಲ್ಲಾ ಕೊಡು, ಇಲ್ಲದಿದ್ದರೆ



www.shikarat.com
Scanned with OKEN Scanner

ನಿನ್ನನ್ನು ಹೊತ್ತುಕೊಂಡು ಹೋಗ್ತೀನಿ" ಎಂದು ರಾಕ್ಷಸ ಹೇಳಿದ. ಅದಕ್ಕೆ ಅವಳು "ಅಯ್ಯಾ ರಾಕ್ಷಸ. ನಾನು ಹಿಂದಕ್ಕೆ ಬರುವಾಗ ನಿಂಗೆ ಒಂದ್ಮುದ್ದೆ ತರ್ತೀನಿ ನನ್ನನ್ನು ಬಿಟ್ಟುಬಿಡು" ಎಂದಳು. "ಹಾಗೆಯೇ ಆಗಲಿ; ನಾನು ಇಲ್ಲಿಯೇ ಕಾಯುತ್ತೇನೆ, ಬೇಗ ಬಾ" ಎಂದು ಹೇಳಿ ಬಿಟ್ಟುಬಿಟ್ಟನು. ಅವಳು ಅಣ್ಣಂದಿರ ಬಳಿಗೆ ಬಂದು ಊಟ ನೀಡಿದಳು. ನಾಲ್ಕು ಜನ ಅಣ್ಣಂದಿರ ಊಟವೂ ಹಳಸಿ ನೀರಾಗಿ ಹೋಗಿತ್ತು. ಕುಂಟನ ಊಟ ಮಾತ್ರ ಮಲ್ಲಿಗೆಯಂತೆ ಆಗಿತ್ತು. ಎಲ್ಲಾ ಊಟ ಮಾಡಿದ ಮೇಲೆ ಒಂದು ತುತ್ತನ್ನು ಮಾತ್ರ ಉಳಿಸಿಕೊಂಡಳು. ಆ ತುತ್ತನ್ನು ಒಂದು ದುಂಡನೆಯ ಕಲ್ಲಿಗೆ ಸುತ್ತಲೂ ಮೆತ್ತಿದಳು. ಊರಿಗೆ ಮರಳುವಾಗ ತನ್ನ ಜೊತೆಗೆ ಯಾರಾದರೂ ಬರುವಂತೆ ಕೇಳಿದಳು. ಅವರು ಕುಂಟವನ್ನು ಕಳಿಸಿದರು. ಕುಂಟನೂ ತೊರೆ ಇನ್ನೂ ಬಹಳ ದೂರ ಇದೆ ಎನ್ನುವಾಗಲೇ ಹಿಂದಕ್ಕೆ ಬಂದುಬಿಟ್ಟನು. ಇವಳು ತೊರೆಯ ಬಳಿಗೆ ಬಂದಳು. ರಾಕ್ಷಸ ಅಲ್ಲಿಯೇ ಕಾಯುತ್ತಿದ್ದ. ಬಂದಕೂಡಲೇ, "ಮುದ್ದೆಯನ್ನು ಕೊಡು" ಎಂದನು ಅವಳು ಮುದ್ದೆಯನ್ನು ಮೆತ್ತಿದ್ದ ಕಲ್ಲನ್ನು ನೀಡಿ ಬೇಗ ಬೇಗ ಊರಿಗೆ ಬಂದುಬಿಟ್ಟಳು. ರಾಕ್ಷಸ ಮುದ್ದೆಯನ್ನು ಕಡಿದು ನೋಡಿದ. ಬರಿಯ ಕಲ್ಲು ! "ಎಲಾ ಇವಳಾ, ನಾಳೆಗೆ ಬರಲಿ ಸರಿಯಾಗಿ ಮಾಡ್ತೀನಿ !" ಎಂದು ಅಲ್ಲಿಯೇ ಕಾದು ಕುಳಿತ.

ಮರುದಿವಸ ಊಟವನ್ನು ತೆಗೆದುಕೊಂಡು ಮತ್ತೆ ಬಂದಳು. ರಾಕ್ಷಸ ಮುಂದೆ ಹಾರಿ "ಏನು ನನಗೆ ಮೋಸಮಾಡಿ ಹೋಗ್ತಿಯೋ, ಇವತ್ತು ನಿನ್ನನ್ನು ಇಲ್ಲೆ ತಿಂದು ಹಾಕ್ದೆ ಬಿಡ್ತೀನಾ!" ಎಂದು ಅಬ್ಬರಿಸಿತು. ಆಗ ಅವಳು "ಅಪ್ಪಾ ರಾಕ್ಷಸ ಇವತ್ತು ಒಂದು ದಿನಬಿಟ್ಟು ಬಿಡು. ಇವತ್ತು ನಿನಗೆ ಮುದ್ದೆ ತರದೆ ಹೋದರೆ ನಾಳೆ ಹಾಗೆಯೇ ಮಾಡುವಿಯಂತೆ" ಎಂದಳು. "ನೋಡೋಣ" ವೆಂದು ರಾಕ್ಷಸ "ಹೋಗು" ಎಂದಿನು. ಸರಿ ಇವಳು ಬಂದಳು, ಅಣ್ಣಂದಿರಿಗೆಲ್ಲಾ ಊಟಕ್ಕೆ ನೀಡಿದಳು ಒಂದು ತುತ್ತನ್ನು ಮಾತ್ರ ಉಳಿಸಿಕೊಂಡಳು. ಎಂದಿನಂತೆ ಒಂದು ಕಲ್ಲಿಗೆ ಅದನ್ನು ಮೆತ್ತಿಕೊಂಡು ಕುಂಟನನ್ನು ಕರೆದುಕೊಂಡು ಬಂದಳು. ಕುಂಟ ನೆನ್ನಿನಂತೆಯೇ ಹಿಂದಿರುಗಿದ. ರಾಕ್ಷಸ ಕಾಯುತ್ತಿದ್ದ. ಅವಳು ಆ ಮುದ್ದೆಯನ್ನು ಕೊಟ್ಟಳು. ಕಡಿದು ನೋಡಿ "ಈ ದಿನವೂ ಮೋಸ ಮಾಡಿದೆಯಾ!" ಎಂದು ಅವಳನ್ನೇ ಹೊತ್ತುಕೊಂಡು ತನ್ನ ಕಾಡಿಗೆ ಹೊರಟು ಹೋದ. ಇತ್ತಕಡೆ ಉಳುಮೆಯನ್ನು ಮುಗಿಸಿಕೊಂಡು ಐದು ಮಂದಿ ಅಣ್ಣಂದಿರೂ ಮನೆಗೆ ಬಂದರು. ತಾಯಿ ಮಗಳನ್ನು ಕಾಣದೆ ಗಾಬರಿಯಿಂದ ಕೇಳಿದಳು. " ಮಧ್ಯಾಹ್ನವೇ ಬಂದಳು" ಎಂದು ಕುಂಟನನ್ನು ಕರೆದು ಎಲ್ಲಾ ರೇಗಿದರು. ಅವನು ತೊರೆಯ ಬಾರೆಯವರೆಗು ಕಳಿಸಿಬಂದೆ ಎಂದ. "ನೀನೇ ಹುಡುಕಿಕೊಂಡು ಬರಬೇಕು, ಇಲ್ಲದಿದ್ದರೆ ನಿನ್ನ ಕೊಂದು ಬಿಡ್ತೀವಿ" ಎಂದು ಎಲ್ಲಾ ಅವನ ಮೇಲೆ ರೇಗಿದರು. ಕುಂಟ ಅಳುತ್ತಾ ಅಳುತ್ತಾ ಮನೆಯನ್ನು ಬಿಟ್ಟು ಹೊರಟ. ದಾರಿಯಲ್ಲಿ ಅವನಿಗೆ ಒಂದು ಬಾನಿ ಸಿಕ್ಕಿತು. ಅದನ್ನು ತೆಗೆದುಕೊಂಡ. ಇನ್ನೂ ಮುಂದೆ ಹೋದ, ಒಂದು ಹಲುಬೆ ಸಿಕ್ಕಿತು. ಅದನ್ನೂ ತೆಗೆದುಕೊಂಡ, ಹಾಗೆಯೇ ಮುಂದೆ ಹೊರಟ, ಹೋಗುತ್ತಾ, ಹೋಗುತ್ತಾ, ಒಂದು ಕಾಡು ಸಿಕ್ಕಿತು. ಅಲ್ಲಿ ಒಂದು ಮನೆಯೂ ಸಿಕ್ಕಿತು. ಅದೇ ರಾಕ್ಷಸನ ಮನೆ.

P.T.O.



www.shikarat.com

Scanned with OKEN Scanner

ಕುಂಟ ಮನೆಗೆ ಬಂದ, ಮನೆಯಲ್ಲಿ ರಾಕ್ಷಸ ಇರಲಿಲ್ಲ, ಹೊಟ್ಟೆಗೆ ತರಲು ಹೋಗಿದ್ದ, ತಂಗಿ, ಅಣ್ಣನನ್ನು ಕಂಡು, "ರಾಕ್ಷಸ ಕಂಡರೆ ನಿನ್ನನ್ನು ಬಿಟ್ಟಿತ್ತ ! ಬಾ ಇಲ್ಲಿ ಅಟ್ಟದ ಮೇಲೆ ಇರು" ಎಂದು, ಕುಂಟ, ಅವನು ತಂದ ಕತ್ತೆ, ಕಡಜ, ಹಲುಬೆ, ಬಾನಿ ಎಲ್ಲವನ್ನೂ ಮೇಲಕ್ಕೆ ಸಾಗಿಸಿದಳು. ಕುಂಟ ತಂಗಿಯನ್ನು ಕರೆದು, "ರಾಕ್ಷಸ ಬಂದರೆ ಮೇಲೆ ನಿನಗಿಂತ ದೊಡ್ಡ ರಾಕ್ಷಸ ಇದೆ ಎಂದು ಹೇಳು" ಎಂದು ಹೇಳಿಕೊಟ್ಟ ತಂಗಿ ಒಪ್ಪಿಕೊಂಡಳು.

ಸ್ವಲ್ಪ ಹೊತ್ತು ಕಳೆಯಿತು. ರಾಕ್ಷಸ ಮನೆಗೆ ಬಂದು. "ಎಲೇ ಹೆಣ್ಣೇ ಅಡಿಗೆ ಮಾಡಿದ್ದೀಯಾ ?" ಎಂದ "ಹುಂ" ಎಂದು ಹೇಳಿದಳು. ಊಟಕ್ಕೆ ಕುಳಿತ ಮೇಲೆ ಏನೋ ಶಬ್ದವಾಯಿತು. ರಾಕ್ಷಸ "ಆ ಏನದು" ಎಂದು ಆರ್ಭಟಿಸಿದ, ಇವಳು "ನೀನು ಹೋದ ಮೇಲೆ ಒಂದು ದೊಡ್ಡ ರಾಕ್ಷಸ ಬಂದು ಮೇಲೆ ಕುಳಿತಿದ್ದಾನೆ." ಎಂದಳು, "ಅವನಾರು ?" ಎಂದಿತು ಆ ರಾಕ್ಷಸ, ಕುಂಟ ಮೇಲಿನಿಂದ ಹಲುಬೆಯನ್ನು ತೋರಿದ. ತಂಗಿ, "ನೋಡು ಅದರ ಹಲ್ಲು ಹೇಗಿದೆ!" ಎಂದಳು, ಕುಂಟ ಬಾನಿಯನ್ನು ತೋರಿದ. "ನೋಡು ಅದರ ಬಾಯಿ ಹೇಗಿದೆ!" ಎಂದಳು, ರಾಕ್ಷಸನಿಗೆ ಸ್ವಲ್ಪ ಭಯವಾಯಿತು. ಕುಂಟ ಕತ್ತೆಯ ಕಿವಿಗೆ ಕಡಜವನ್ನು ಬಿಟ್ಟ, ಅದು ಮನೆ ಬಿದ್ದು ಹೋಗುವ ಹಾಗೆ ಕೂಗತೊಡಗಿತು. ರಾಕ್ಷಸ, "ಓಹೋ ಯಾರೋ ನನಗಿಂತ ದೊಡ್ಡ ರಾಕ್ಷಸ !" ಎಂದುಕೊಂಡು ಹೆದರಿ ಮನೆಯನ್ನು ಬಿಟ್ಟು ಓಡಿ ಹೋದ. ಕುಂಟ ಮೆಲ್ಲನೆ ಕೆಳಗಿಳಿದ. ಇನ್ನೂ ಹೆಚ್ಚು ಹೊತ್ತು ಇಲ್ಲಿದ್ದರೆ ಅಪಾಯ ಎಂದು ತಂಗಿಯನ್ನು ಕರೆದುಕೊಂಡು ಊರಿಗೆ ಬಂದ. ಕುಂಟನ ಕತೆಯನ್ನೆಲ್ಲಾ ಕೇಳಿ ಅಣ್ಣಂದಿರೆಲ್ಲ ಬೆರಗಾದರು. ಅಂದಿನಿಂದ ಅವನನ್ನು ಹೆಚ್ಚು ಪ್ರೀತಿಯಿಂದ ಕಾಣತೊಡಗಿದರು. ಅಲ್ಲಿಂದ ಮುಂದೆ ಎಲ್ಲಾ ಸುಖವಾಗಿ ಬಾಳಿಕೊಂಡು ಹೋದರು.

25

4. ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ.

Swamy hurriedly got up and spread his bed under the bench and crouched there. It seemed to be a much safer place, more compact and reassuring. He shut his eyes tight and encased himself in his blanket once again and unknown to himself fell asleep and in sleep was racked with nightmares. A tiger was chasing him. His feet were stuck to the ground. He desperately tried to escape but his feet would not move; the tiger was at his back, and he could hear its claws scratching the ground ... scratch, scratch, and then a loud thud ... Swamy tried to open his eyes but his eyelids would not open, and the nightmare continued. It threatened to continue forever. Swamy groaned in despair.

P.T.O.



www.shikarat.com

Scanned with OKEN Scanner

## SECTION–B / ವಿಭಾಗ–B

**5.** ಪತ್ರ ಲೇಖನ / **Letter Writing :**

ಈ ಕೆಳಗಿನ ವಿಷಯವನ್ನು ಕುರಿತು **100** ಪದಗಳಿಗೆ ಮೀರದಂತೆ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ. *10*

**ಹೆಣ್ಣು ಭ್ರೂಣ ಹತ್ಯೆ**

<u>ವಿಶೇಷ ಸೂಚನೆ :</u>

(ಗೆ, ವಿಳಾಸ - ಸಂಪಾದಕರು ಚೈತ್ರ ಪತ್ರಿಕೆ, ಬೆಂಗಳೂರು. ಇವರಿಗೆ ಮತ್ತು ಇಂದ ವಿಳಾಸ - XXX, ಸಂಖ್ಯೆ 1, YYY ರಸ್ತೆ, ZZZ-ಸ್ಥಳ) - ಕಾಲ್ಪನಿಕವಾಗಿ ನೀಡಲಾಗಿರುವ ಈ ಮೇಲಿನ ವಿಳಾಸವನ್ನಷ್ಟೇ ಬಳಸಿ ಪತ್ರ ಬರೆಯಲು ಸೂಚಿಸಿದೆ. ಇದರ ಹೊರತಾಗಿ ಬೇರೆ ಯಾವುದೇ ಹೆಸರನ್ನಾಗಲೀ, ವಿಳಾಸವನ್ನಾಗಲೀ, ಸಹಿಯನ್ನಾಗಲೀ ಪತ್ರ ಲೇಖನದಲ್ಲಿ ಬರೆಯಬಾರದು. ಈ ರೀತಿಯ ಯಾವುದೇ ನಮೂದು ಬರೆದಲ್ಲಿ ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು ಮತ್ತು "ದುರಾಚಾರ ಪ್ರಕರಣ" ಎಂದು ಪರಿಗಣಿಸಿ ಅಭ್ಯರ್ಥಿತನವನ್ನು ರದ್ದುಗೊಳಿಸುವುದಲ್ಲದೆ ಆಯೋಗವು ತೆಗೆದುಕೊಳ್ಳುವ ಶಿಸ್ತುಕ್ರಮಕ್ಕೆ ಅಭ್ಯರ್ಥಿಯು ಒಳಗಾಗಬೇಕಾಗುತ್ತದೆ.

**6.** ಈ ಕೆಳಗಿನ ಎರಡು ಗಾದೆಗಳಿಗೆ ಅರ್ಥಸ್ವಾರಸ್ಯವನ್ನು ವಿವರಿಸಿ. *2×5=10*

(a) ಆಳಾಗಬಲ್ಲವನು ಅರಸಾಗಬಲ್ಲನು

(b) ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

**7.** ಈ ಕೆಳಗಿನ ನುಡಿಗಟ್ಟುಗಳಿಗೆ ಅರ್ಥ ವಿವರಿಸಿ ಅವುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ. *2×3=6*

(a) ಎತ್ತಿದ ಕೈ

(b) ನೀರಿಗೆ ಹಾಕು

**8.** ಕೆಳಗಿನ ವಾಕ್ಯಗಳಲ್ಲಿ ಕಂಡುಬರುವ ಕಾಗುಣಿತಾಕ್ಷರಗಳ ತಪ್ಪುಗಳನ್ನು ತಿದ್ದಿ ಬರೆಯಿರಿ. *4×1=4*

(a) ವ್ಯಕ್ತಿಗೆ ಖಷ್ಟ ಭಂದಶ್ಟು ಪರಿಫಕ್ವವಾಗೂತಾನೆ.

(b) ಏಳಿದ್ದನ್ನು ಭರದು ಕೊಳುವಾಗಲು ತೆಪ್ಪಾಗೂಹುದೆ?

(c) ಕಂನ್ನಡಾ ಬಾಸೆಗೆ ಮತ್ತೂ ಸಾಹಿತ್ಯಕ್ಕೇ ಎರಡೂ ಶಾವಿರಾ ವರ್ಷಗಳ ಸುದೀರ್ಗ ಇತಿಹಸವಿದೇ.

(d) ಗುರೀಯನೂ ಮುಥ್ಥಲೂ ಸರಿಯದ ಧೃಡಾ ನಿರ್ದರ ಮುಕ್ಯ.

P.T.O.



www.shikarat.com
Scanned with OKEN Scanner

**9.** ಈ ಕೆಳಗಿನವುಗಳಿಗೆ ತತ್ಸಮ-ತದ್ಭವ ರೂಪಗಳನ್ನು ಬರೆಯಿರಿ. *5×1=5*

(a) ಕಾರ್ಯ

(b) ಕೊಡಲಿ

(c) ವಂಧ್ಯಾ

(d) ಯಜ್ಞ

(e) ಚೀರ

**10.** ಈ ಕೆಳಗಿನವುಗಳನ್ನು ಬಿಡಿಸಿ ಬರೆಯಿರಿ. *5×1=5*

(a) ಭೂತಾಯಿ

(b) ಸಜ್ಜನ

(c) ಕಂಪೊಗೆದ

(d) ಮಹೋತ್ಸವ

(e) ಇಮ್ಮಾವು

**11.** ಈ ಕೆಳಗಿನವುಗಳಿಗೆ ಅರ್ಥ ಬರೆಯಿರಿ. *5×1=5*

(a) ಶಾಲಿವನ

(b) ರಿಪು

(c) ಮೇದಿನಿ

(d) ಪುಂಗವ

(e) ಜ್ಞಾತಿ

**12.** ಈ ಕೆಳಗಿನವುಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ. *5×1=5*

(a) ಸಮಷ್ಟಿ

(b) ಅನೃತ

(c) ಸ್ಥಾವರ

(d) ಭೋಗ

(e) ಅಗ್ಗ



www.shikarat.com
Scanned with OKEN Scanner